ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಸಿ.ಜೆ.ಎಂ., ನ್ಯಾಯಾಲಯ, ಉಡುಪಿ.

| | | |
|---|---|---|
| ಸಾಕ್ಷಿದಾರರ ಹೆಸರು | : | ಜನಾರ್ಧನ |
| ತಂದೆಯ ಹೆಸರು | : | ದಿಃ ನಾರಾಯಣ |
| ವಯಸ್ಸು | : | 41 ವರ್ಷ |
| ಉದ್ಯೋಗ | : | ವಾಹನ ನಷ್ಟ ಸರ್ವೇಯರ |
| ವಾಸಸ್ಥಳ | : | ಉಡುಪಿ |

ದಿನಾಂಕ 02-07-2025 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆಃ ಅರ್ಜಿದಾರರ ಪರ ಶ್ರೀ ಎಸ್ ಎ ವಕೀಲರಿಂದಃ**

ಅರ್ಜಿದಾರರಿಗೆ ಸೇರಿದ ವಾಹನ ಸಂಖ್ಯೆ ಸ್ವತ್ತು ಕೆಎ 20 ಎಎ 4280 ವಾಹನವನ್ನು ನಾನು ಪರಿಶೀಲಿಸಿ ಸರ್ವೆ ಮಾಡಿರುತ್ತೇನೆ. ಈ ಬಗ್ಗೆ ನಾನು ವರದಿ ಕೊಟ್ಟಿರುತ್ತೇನೆ . ಸದ್ರಿ ವರದಿಯಲ್ಲಿ ನನ್ನ ಸಹಿ ಇರುತ್ತದೆ. ವರದಿಯನ್ನು ಈಗಾಗಲೇ ನಿಪಿ 5 ಎಂದು ಗುರುತಿಸಿಲಾಗಿದ್ದು ಸಾಕ್ಷಿಯ ಒಂದು ಸಹಿಯನ್ನು 5(ಎ) ಎಂದು ಗುರುತಿಸಲಾಯಿತು ನಾನು ವರದಿ ಕೊಡಲು ಮತ್ತು ವಾಹನ ಪರಿಶೀಲಿಸಲು ಪಡೆದ ಫೀ ಬಗ್ಗೆ ಬಿಲ್ಲನ್ನು ವಿಮಾ ಕಂಪನಿಗೆ ಕೊಟ್ಟಿರುತ್ತೇನೆ. ನನಗೆ ಅರ್ಜಿದಾರರು ಹಣ ಕೊಟ್ಟಿರುವುದಿಲ್ಲ ಆದರೆ ವಿಮಾ ಕಂಪನಿಯವರು ಕೊಟ್ಟಿರುತ್ತಾರೆ ಸದ್ರಿ ಬಿಲ್ಲಿನಲ್ಲಿ ನನ್ನ ಸಹಿ ಇರುತ್ತದೆ. ಬಿಲ್ಲನ್ನು ನಿಪಿ 7 ಎಂದು ಗುರುತಿಸಿದ್ದು ಸಾಕ್ಷಿ ಸಹಿಯನ್ನು 7(ಎ) ಎಂದು ಗುರುತಿಸಲಾಯಿತು. ನ್ಯಾಯಾಲಯ ದಲ್ಲಿ ಹಾಜರು ಪಡಿಸಿರುವ ನಿಪಿ 8 ಫೋಟೋ ನಾನು ತೆಗೆದಿಲ್ಲ.

**ಪಾಟೀ ಸವಾಲು - 2 ನೇ ಎದುರುದಾರರ ಪರ ಶ್ರೀ ಡಿಬಿಎಸ್ ವಕೀಲರಿಂದಃ**

ಕೆ .ಎ. 20 ಎಎ 4280 ವಾಹನ ಯುನೈಟೆಡ್ ಇಂಡಿಯಾ ಇನ್ಸೂರೆನ್ಸ್ ಒಳಪಟ್ಟಿತ್ತು ಎಂದರೆ ಸರಿ. ಸದ್ರಿ ವಾಹನಕ್ಕೆ ಸರ್ವೆ ಮಾಡಲು ವಿಮಾ ಕಂಪನಿಯವರು ಎಂದರೆ ಯುನೈಟೆಡ್ ಇಂಡಿಯಾ ಇನ್ಸೂರೆನ್ಸ್ ಕಂಪನಿಯವರು ನನ್ನನ್ನು ಕಳುಹಿಸಿದ್ದರು ಎಂದರೆ

ಸರಿ. ಸದ್ರಿ ವಾಹನಕ್ಕೆ ಪಾಲಿಸಿದಾರರಿಗೆ Own Damage Claim ಸೌಲಭ್ಯ ಇತ್ತು ಎಂದರೆ ಸರಿ. ನಾನು ಕೊಟ್ಟ ವರದಿಯಲ್ಲಿ ವಾಹನ ಮಾಲಿಕರಿಗೆ 47741.23 ರೂಪಾಯಿಗಳನ್ನು ಕೊಡಬಹುದು ಮತ್ತು ಅಷ್ಟು ಮೌಲ್ಯದ ಪಾರ್ಟ್ಸ್ ಡ್ಯಾಮೇಜ್ ಆಗಿದೆ ಎಂದು ಹೇಳಿರುತ್ತೇನೆ ಎಂದರೆ ಸರಿ. ಸಾಕ್ಷಿ ಮುಂದುವರಿದು ಮೇಲೆ ಹೇಳಿದ ಹಣ ವಾಹನಕ್ಕೆ ಸವಕಳಿ ಕಳೆದು ಮತ್ತು ಪಾಲಿಸಿಯ ಕಂಡೀಷನ್ ಪ್ರಕಾರ ಅಷ್ಟು ಮೇಲೆ ಹೇಳಿದ ಹಣವನ್ನು ನಿಗದಿಪಡಿಸಿರುತ್ತೇವೆ ಎಂದು ತಿಳಿಸಿರುತ್ತಾರೆ. ಅರ್ಜಿದಾರರಾದ ರೋಷನ್ ನಮಗೆ ವಾಹನವನ್ನು ಪರಿಶೀಲಿಸಿ ವರದಿ ಕೊಡಿ ಎಂದು ಕೇಳಿಲ್ಲ. ನಾನು ಅರ್ಜಿದಾರ ರಿಗೆ ನನ್ನ ಸರ್ವೆ ವರದಿಯನ್ನು ಕೊಟ್ಟಿಲ್ಲ.

ನಾನು ಸಾಮಾನ್ಯವಾಗಿ ವರದಿ ಕೊಡುವಾಗ ಪೊಟೋಗಳನ್ನು ವರದಿ ಜೊತೆ ಲಗತ್ತಿಸಿ ಕೊಡುತ್ತೇನೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರಿದು ನಾನು ಪೋಟೋವನ್ನು ಆನ್ ಲೈನ್ ನಲ್ಲಿ ವರದಿಯೊಂದಿಗೆ ಕಳುಹಿಸಿಕೊಡುತ್ತೇನೆ ಎಂದು ತಿಳಿಸುತ್ತಾರೆ, ನಾನು ಅರ್ಜಿದಾರರಿಗೆ ಆನ್ ಲೈನ್ ಮುಖೇನ ಪೊಟೋವನ್ನು ಕಳುಹಿಸಿಲ್ಲ. ನಿಪಿ 8 ಪೋಟೋಗಳನ್ನು ನಾನು ಅರ್ಜಿದಾರರಿಗೆ ಕೊಟ್ಟಿಲ್ಲ ಮತ್ತು ನಾನು ಅದನ್ನು ತೆಗೆದಿಲ್ಲ. ವಾಹನಕ್ಕೆ ಸಂಬಂದಪಟ್ಟಂದತೆ ನಿಪಿ 6 Estimate ನ್ನು ನಾನು ಅರ್ಜಿದಾರರಿಂದ ಪಡೆದಿಲ್ಲ ಆದರೆ ವಿಮಾ ಕಂಪನಿಯ ಮೂಲಕ ಪಡೆದಿರುತ್ತೇನೆ. ನಾನು ಹೇಳಿರುವಷ್ಟು 47,741 ರೂ ನಷ್ಟವಾಗಿಲ್ಲ ಎಂದರೆ ಸರಿಯಲ್ಲ.

**ಮರು ವಿಚಾರಣೆ : ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಸಾಕ್ಷ್ಯವನ್ನು ನನ್ನ ಉಕ್ತಲೇಖನದ ಮೂಲಕ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೇ.ಸ.ಇದೆ ಎಂದು ಒಪ್ಪಿದರು

ಪ್ರ.ಹಿ.ಸಿ.ನ್ಯಾ ಮತ್ತು ಸಿ.ಜೆ.ಎಂ
ಉಡುಪಿ.